# ಬೋಧಕರ ವಿವರ

೧. ಹೆಸರು : ಡಾ.ಎಂ.ಚಂದ್ರಪೂಜಾರಿ

೨. ಜನ್ಮ ದಿನಾಂಕ : ೦೨.೧೦.೧೯೫೬

೩. ವಿದ್ಯಾರ್ಹತೆ : ಪಿಎಚ್.ಡಿ

೪. ವಿಳಾಸ : ಡಾ.ಎಂ.ಚಂದ್ರಪೂಜಾರಿ
ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೫. ಸ್ಥಿರ ದೂರವಾಣಿ ಸಂಖ್ಯೆ : ೦೮೩೯೪ ೨೪೧೩೩೭(೧೮)

೬. ಮೊಬೈಲ್ ಸಂಖ್ಯೆ : ೯೪೪೮೧೬೫೧೩೦

೭. ಫ್ಯಾಕ್ಸ್ ಸಂಖ್ಯೆ : ೦೮೩೯೪ ೨೪೧೩೩೪

೮. ಇ–ಮೇಲ್ ವಿಳಾಸ : chandrapoojary@yahoo.com

೯. ಕಾರ್ಯನಿರ್ವಹಿಸುತ್ತಿರುವ ವಿಭಾಗ : ಅಭಿವೃದ್ಧಿ ಅಧ್ಯಯನ

೧೦. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ : ಪ್ರಾಧ್ಯಾಪಕರು

೧೧. ವಿಷಯ ತಜ್ಞತೆ
೧. ಸಮಾಜ ಸಂಶೋಧನ ವಿಧಾನಗಳು
೨. ಸ್ಥಳೀಯ ಸರಕಾರ – ಪಂಚಾಯತ್ ರಾಜ್
೩. ಅಭಿವೃದ್ಧಿಯ ಹೊರಗಿಡುವ ಮತ್ತು ಒಳಗೊಳಿಸುವ ಪ್ರಕ್ರಿಯೆಗಳು
೪. ಉದ್ಯಮಶೀಲತೆ ಮತ್ತು ಗ್ರಾಮೀಣ ಮಾರುಕಟ್ಟೆ

೧೨. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು
೧. ಅಭಿವೃದ್ಧಿಯ ಹೊರಗಿಡುವ ಮತ್ತು ಒಳಗೊಳಿಸುವ ಪ್ರಕ್ರಿಯೆಗಳು
೨. ಸಮಾಜ ಸಂಶೋಧನ ವಿಧಾನಗಳು
೩. ಸ್ಥಳೀಯ ಸರಕಾರ – ಪಂಚಾಯತ್ ರಾಜ್
೪. ಉದ್ಯಮಶೀಲತೆ ಮತ್ತು ಗ್ರಾಮೀಣ ಮಾರುಕಟ್ಟೆ

೧೩. ಯೋಜನೆಗಳ ವಿವರ

೧೩.೧. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು

೧. ನಿರ್ಮಲ ಕರ್ನಾಟಕ ಯೋಜನೆಯ ಮೌಲ್ಯಮಾಪನ ಅಧ್ಯಯನ

ಗ್ರಾಮೀಣ ಶುಚಿತ್ವವನ್ನು ಹೆಚ್ಚಿಸುವ ದೃಷ್ಟಿಯಿಂದ ತೊಂಬತ್ತರ ದಶಕದಲ್ಲಿ ಕರ್ನಾಟಕ ಸರಕಾರ ಗ್ರಾಮೀಣ ಜನರಿಗೆ ಶೌಚಾಲಯಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಜಾರಿಗೆ ತಂದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆ ಅನುಷ್ಠಾನಗೊಂಡಿರುವ ಪ್ರಮಾಣ ಮತ್ತು ಬಳಕೆಯನ್ನು ಅಧ್ಯಾಯನ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಅಧ್ಯಾಯನದ ಮುಖ್ಯ ಫಲಿತಗಳು ಇಂತಿವೆ. ೧. ಸರಕಾರ ಅಪೇಕ್ಷಿಸಿದ ಪ್ರಮಾಣದಲ್ಲಿ ಮತ್ತು ಗುಣಮಟ್ಟದಲ್ಲಿ ಶೌಚಾಲಯಗಳು ನಿರ್ಮಾಣಗೊಂಡಿಲ್ಲ ೨. ಈ ಯೋಜನೆಗಾಗಿ ಮೀಸಲಿರುಸುವ ಸಂಪನ್ಮೂಲಗಳು ದೊಡ್ಡ ಪ್ರಮಾಣದಲ್ಲಿ ದುರ್ಬಳಕೆ ಗೊಂಡಿವೆ.



PDF created with pdfFactory trial version www.pdffactory.com

**೨. ಎಸ್ ಜಿ ವೈ ಯೋಜನೆಯ ಅಧ್ಯಯನ**

ಈ ಅಧ್ಯಯನದ ಮುಖ್ಯ ಉದ್ದೇಶ ಸ್ವರ್ಣಜಯಂತಿ ಗ್ರಾಮ್ ಸ್ವರೋಜ್ ಯೋಜನೆಯಡಿಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಆರಂಭಿಸಬಹುದಾದ ಸಣ್ಣ ಉದ್ದಿಮೆಗಳನ್ನು ಗುರುತಿಸುವುದು. ಜಿಲ್ಲೆಯ ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕಿನಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸಣ್ಣ ಉದ್ದಿಮೆಗಳನ್ನು ಅಧ್ಯಯನ ಮಾಡಿ ಜಿಲ್ಲೆಯಲ್ಲಿ ಆರಂಭಿಸಬಹುದಾದ ಸಣ್ಣ ಪುಟ್ಟ ಉದ್ದಿಮೆಗಳ ಬಗ್ಗೆ ತೀರ್ಮಾನಕ್ಕೆ ಬರಲಾಯಿತು. ಉದ್ದಿಮೆಗಳನ್ನು ಅಧ್ಯಯನ ಮಾಡುವಾಗ ಈ ಕೆಳಗಿನ ಅಂಶಗಳನ್ನು ಪರಿಗಣಿಸಲಾಗಿದೆ. ಒಂದು, ಉದ್ದಿಮೆಗಳು ಬಳಸುವ ಕಚ್ಚಾ ಮಾಲುಗಳು, ಹಣಕಾಸು, ಕೂಲಿ ಇತ್ಯಾದಿಗಳ ಮಾರುಕಟ್ಟೆ, ಎರಡು ಔಟ್‌ಪುಟ್ ಮಾರುಕಟ್ಟೆ ಸಗಟು ಮತ್ತು ಚಿಲ್ಲರೆ ವ್ಯಾಪಾರ ಮತ್ತು ಉದ್ದಿಮೆ ಬೆಳೆಸಲು ಅಗತ್ಯವಿರುವ ಪೂರಕ ಪರಿಸರ ಹಣಕಾಸು ನೆರವು ಸರಕಾರ ಅನುದಾಗಳ ಪೂರೈಕೆ ಮೆಕಾನಿಸಂ ಇತ್ಯಾದಿಗಳು.

**೩. ಡಿಫ್ಲೋರೈಡ್ ಫಿಲ್ಟರ್ ಬಳಕೆಯ ಮೌಲ್ಯಮಾಪನ ಅಧ್ಯಯನ**

ಬಳ್ಳಾರಿ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಹಲವಾರು ಪಂಚಾಯತ್‌ಗಳಲ್ಲಿ ಪೂರೈಕೆಯಾಗುವ ಕುಡಿಯುವ ನೀರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಫ್ಲೋರೈಡ್ ಅಂಶ ಇದೆ. ಫ್ಲೋರೈಡ್ ಎಲುಬಿನ ಬೆಳವಣಿಗೆಯ ಮೇಲೆ ಪರಿಣಾಮ ಬೀರುವುದರಿಂದ ಜನರ ಆರೋಗ್ಯಕ್ಕೆ ದೊಡ್ಡ ಹೊಡೆತ ಕೊಡುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಲು ಗ್ರಾಮೀಣ ಜನರಿಗೆ ಡಿಫ್ಲೋರೈಡ್ ಫಿಲ್ಟರ್‌ಗಳನ್ನು ಹಂಚಲಾಯಿತ್ತು. ಫ್ಲೋರೈಡ್ ಫಿಲ್ಟರ್‌ಗಳ ಹಂಚುವಿಕೆ ಕ್ರಮ ಪ್ರಕಾರ ನಡೆದಿದೆಯೇ? ಒಂದು ವೇಳೆ ಹಂಚುವಿಕೆಯಲ್ಲಿ ಕ್ರಮಲೋಪವಾಗಿದ್ದರೆ, ಯಾವ ಹಂತದಲ್ಲಿ ಮತ್ತು ಎಷ್ಟು ಪ್ರಮಾಣದಲ್ಲಿ ಕ್ರಮಲೋಪ ಆಗಿದೆ? ಫಿಲ್ಟರ್‌ಗಳನ್ನು ಪಡೆದವರು ಅವುಗಳನ್ನು ಸೂಚಿತ ಉದ್ದೇಶಗಳಿಗೆ ಬಳಸುತ್ತಿದ್ದಾರೆಯೇ? ಒಂದು ವೇಳೆ ಬಳಸದಿದ್ದರೆ ಯಾಕೆ ಬಳಸುತ್ತಿಲ್ಲ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಮೌಲ್ಯಮಾಪನ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

**೪. ಜನಾಯೋಜನೆ – ಕೃಷ್ಣನಗರ ಗ್ರಾಮಪಂಚಾಯತ್ ಅಧ್ಯಯನ**

ಈ ಯೋಜನೆ ಎರಡು ಉದ್ದೇಶಗಳನ್ನು ಹೊಂದಿದೆ. ಒಂದು ಪಂಚಾಯತ್ ಒಟ್ಟಾರೆ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು. ಜತೆಗೆ ಪಂಚಾಯತ್ ಮಟ್ಟದಿಂದ ಯೋಜನೆ ಸಿದ್ಧಪಡಿಸುವುದು. ಪಂಚಾಯತ್ ಯೋಜನೆ ಸಿದ್ಧಪಡಿಸಬೇಕಾದರೆ ನಾಲ್ಕು ಅಭಿವೃದ್ಧಿ ಪಾಲುದಾರರು ಯೋಜನೆ ತಯಾರಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಬೆಕಾಗಿದೆ. ಒಂದು ಗ್ರಾಮಸ್ಥರು, ಎರಡು, ಪಂಚಾಯತ್ ಸದಸ್ಯರು ಮತ್ತು ಅಧ್ಯಕ್ಷರು, ಮೂರು, ಪಂಚಾಯತ್ ಕಾರ್ಯದರ್ಶಿಗಳು ಮತ್ತು ನಾಲ್ಕು ಸಂಬಂಧಿತ ಇತರ ಇಲಾಖೆಗಳು. ಈ ನಾಲ್ಕು ಅಭಿವೃದ್ಧಿ ಪಾಲುದಾರರು ಜನಾಯೋಜನೆಯಲ್ಲಿ ಪಾಲುಗೊಂಡ ಪ್ರಮಾಣ, ಪಾಲುಗೊಳ್ಳದಿರಲು ಕಾರಣಗಳು, ಪಾಲುಗೊಳ್ಳುವಿಕೆಯ ಗುಣಮಟ್ಟ ಇತ್ಯಾದಿ ಸಮಸ್ಯೆಗಳನ್ನು ಈ ಯೋಜನೆಯಲ್ಲಿ ಅಧ್ಯಯನ ಮಾಡಲಾಗಿದೆ.

**೫. ಜನಾಯೋಜನೆ – ಯರೆಹಂಚಿನಾಳ ಗ್ರಾಮಪಂಚಾಯತ್ ಅಧ್ಯಯನ**

ಪಂಚಾಯತ್ ಮಟ್ಟದಿಂದಲೇ ಯೋಜನೆ ಸಿದ್ದ ಪಡಿಸುವ ಕ್ರಮಗಳನ್ನು ಕೇರಳ ಸರಕಾರ ಜಾರಿಗೆ ತಂದಿತ್ತು. ಕರ್ನಾಟಕ ಸರಕಾರ ಕೂಡ ಕೇರಳದ ಮಾದರಿಯಲ್ಲಿ ಜನಯೋಜನೆ ಮಾಡುವ ಆಲೋಚನೆಯಲ್ಲಿತ್ತು. ಕೇರಳ ಮತ್ತು ಕರ್ನಾಟಕ ನಡುವೆ ಹಲವಾರು ವಿಚಾರಗಳಲ್ಲಿತ್ತು – ಶಿಕ್ಷಣ, ಆರೋಗ್ಯ, ಜನರ ರಾಜಕೀಯ ಪ್ರಜ್ಞೆ ಇತ್ಯಾದಿಗಳಲ್ಲಿ ದೊಡ್ಡ ಪ್ರಮಾಣದ ಭಿನ್ನತೆ ಇದೆ. ಇಂತಹ ಸಂದರ್ಭದಲ್ಲಿ ಕೇರಳದಲ್ಲಿ ಆಚರಣೆಯಲ್ಲಿರುವ ಪಂಚಾಯತ್ ಯೋಜನೆಯನ್ನು ನಮ್ಮಲ್ಲಿ ಯಥಾರೂಪದಲ್ಲಿ ಅಳವಡಿಸಬಹುದೇ? ಬದಲಾವಣೆಗಳನ್ನು ಮಾಡಿಕೊಳ್ಳಬೇಕೇ? ಬದಲಾವಣೆಗಳನ್ನು ಮಾಡಿಕೊಳ್ಳುವುದಾದರೆ ಯಾವೆಲ್ಲಾ ಬದಲಾವಣೆಗಳನ್ನು ಮಾಡಿಕೊಳ್ಳಬೇಕು? ಇತ್ಯಾದಿ ಪ್ರಶ್ನೆಗಳನ್ನು ಉತ್ತರಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

**೬. ಇನ್‌ಕ್ಲುಸಿವ್ ಡೆವಲಪ್‌ಮೆಂಟ್ – ಕನ್‌ಸ್ಟ್ರಕ್ಟಿಂಗ್ ದಲಿತ್ ಡೆವಲಪ್‌ಮೆಂಟ್ ಇಂಡೆಕ್ಸ್**

ಮಾನವ ಅಭಿವೃದ್ಧಿ ಸೂಚಿಯನ್ನು ಸಮಸ್ಯೀಕರಿಸುವುದು ಮತ್ತು ಬದಲೀ ಅಭಿವೃದ್ಧಿ ಸೂಚಿಯನ್ನು ಮುಂಚೂಣಿಗೆ ತರುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಆರೋಗ್ಯ ಹಾಗೂ ಶಿಕ್ಷಣವನ್ನು ಆದಾಯದೊಂದಿಗೆ ಸೇರಿಸುವುದರಿಂದ ಮಾನವ ಅಭಿವೃದ್ಧಿ ಸೂಚಿಗೆ ಸಮಗ್ರತೆಯ ಗುಣ ಬಂದಿದೆ ಎನ್ನುವ ವಾದ ಇದೆ. ಆರೋಗ್ಯ ಮತ್ತು ಶಿಕ್ಷಣವನ್ನು ಸಾಮಾಜಿಕ ಅಂಶವೆಂದು ಗುರುತಿಸುವುದು ಎಷ್ಟರಮಟ್ಟಿಗೆ ಸರಿ? ಉತ್ತಮ ಆರೋಗ್ಯ ಅಥವಾ ಶಿಕ್ಷಣಕ್ಕು ಸಾಮಾಜಿಕ ಸ್ಥಾನಮಾನಕ್ಕೂ ಏನು ಸಂಬಂಧ? ಉತ್ತಮ ಆರೋಗ್ಯ ಮತ್ತು ಶಿಕ್ಷಣ ಹೊಂದಿದ ಕೂಡಲೇ ಹೆಚ್ಚಿನ ಸಾಮಾಜಿಕ ಸ್ಥಾನಮಾನ ದೊರೆಯುತ್ತದೆ ಎನ್ನುವ ಗ್ಯಾರಂಟಿ ಏನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

**೧೩.೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು**



PDF created with pdfFactory trial version www.pdffactory.com

**೧. ವಿಕೇಂದ್ರಿಕೃತ ಅಭಿವೃದ್ಧಿ**

ಈ ಅಧ್ಯಯನ ಯೋಜನೆಯ ಮುಖ್ಯ ಉದ್ದೇಶಗಳು ಈ ಮುಂದಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು. ಜಾಗತೀಕರಣದೊಂದಿಗೆ ಪಂಚಾಯತ್‌ನಂತಹ ಸಾಂಸ್ಥಿಕ ರಚನೆಗಳನ್ನು ತಳಸ್ತರದ ಜನರು ಬಳಸಿಕೊಂಡು ತಮ್ಮ ಅಭಿವೃದ್ಧಿಯನ್ನು ತಾವೇ ಮಾಡಿಕೊಳ್ಳಬೇಕೆನ್ನುವ ಇಂಗಿತವನ್ನು ಹೊಂದಿರುವ ಪಾಲಿಸಿಗಳುಹೆಚ್ಚು ಹೆಚ್ಚು ಕಾರ್ಯರೂಪಕ್ಕೆ ಬರುತ್ತಿವೆ. ಆದರೆ ಎಲ್ಲ ಬಗೆಯ ಅಸಮಾನತೆಯನ್ನು ಆಗಾಧ ಪ್ರಮಾಣದಲ್ಲಿ ಹೊಂದಿರುವ ನಮ್ಮಂತಹ ಸಮಾಜದಲ್ಲಿ ಈ ಸಾಂಸ್ಥಿಕ ಪರಿವರ್ತನೆಗಳ ಮೂಲಕವೇ ಸಾಮಾಜಿಕ ಪರಿವರ್ತನೆ ಸಾಧ್ಯವೇ? ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರಗಳಲ್ಲೂ ಮೂಲಭೂತ ಪರಿವರ್ತನೆಗಳ ಅಗತ್ಯವಿಲ್ಲವೇ? ಕೆಳಮಟ್ಟದ ಸಂಸ್ಥೆಗಳನ್ನು ತಮ್ಮ ಹಿತಾಸಕ್ತಿ ರಕ್ಷಣೆಗೆ ಪೂರಕವಾಗಿ ಬಳಸಿಕೊಳ್ಳವಷ್ಟು ತಯಾರಿ ಕೆಳವರ್ಗಗಳಿಗೆ ಇದಯೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

**೨. ಜಂಟೀ ಅರಣ್ಯ ಯೋಜನೆ – ಗ್ರಾಮ ಅರಣ್ಯ ಸಮಿತಿಗಳ ಅಧ್ಯಯನ**

ಜಂಟೀ ಅರಣ್ಯ ಯೋಜನೆಯಲ್ಲಿ ಜನರ ಪಾಲುಗೊಳ್ಳುವಿಕೆಯನ್ನು ಅಧ್ಯಯನ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಹೊಸಪೇಟೆ ತಾಲ್ಲೂಕಿನ ಎರಡು ಹಳ್ಳಿಗಳಲ್ಲಿ ಸಕ್ರಿಯವಾಗಿ ನಡೆಯುತ್ತಿರುವ ಜಂಟೀ ಅರಣ್ಯ ಯೋಜನೆಯನ್ನು ಅಧ್ಯಯನ ಮಾಡುವ ಮೂಲಕ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಲಾಗಿದೆ. ಒಂದು, ಜನರು ಮತ್ತು ಅರಣ್ಯದ ಸಂಬಂಧದಲ್ಲಿ ಆಗುತ್ತಿರುವ ಬದಲಾವಣೆಗಳೇನು? ಜನರು ಮತ್ತು ಅರಣ್ಯ ರಕ್ಷಕರ ನಡುವಿನ ಸಂಬಂಧದಲ್ಲಿ ಆಗುತ್ತಿರುವ ಬದಲಾವಣೆಗಳೇನು? ಜನರು ಸಕ್ರಿಯವಾಗಿ ಯೋಜನೆಯಲ್ಲಿ ಪಾಲುಗೊಳ್ಳುತ್ತಿದ್ದಾರೆಯೇ ಒಂದು ವೇಳೆ ಪಾಲುಗೊಳ್ಳದ್ದಿರೆ ಕಾರಣಗಳೇನು?

**೩. ಸೋಶಿಯಲ್ ಕ್ಯಾಪಿಟಲ್, ಪಂಚಾಯತ್ಸ್ ಆಂಡ್ ಡಿಸೆಂಟ್ರಲೈಸ್ಡ್ ರೂರಲ್ ಡೆವಲಪ್‌ಮೆಂಟ್**

ಕರ್ನಾಟಕದ ಅಭಿವೃದ್ಧಿಯ ಬಹುದೊಡ್ಡ ಕೊರತೆಯೆಂದರೆ ಪ್ರಾದೇಶಿಕ ಅಸಮಾನತೆ. ಈ ಸಮಸ್ಯೆಯ ಪರಿಹಾರಕ್ಕೆ ಹಲವಾರು ಪರಿಹಾರಗಳನ್ನು ಸೂಚಿಸಲಾಗಿದೆ. ಇವುಗಳಲ್ಲಿ ಬಹುತೇಕ ಪರಿಹಾರಗಳು ಮುಖ್ಯವಾಹಿನಿಯ ಅಭಿವೃದ್ಧಿ ಚಿಂತನೆಯ ನೆಲೆಯಿಂದ ಮೂಡಿಬಂದವು. ಅಂದರೆ ಬಂಡವಾಳದ ವಿನಿಯೋಜನೆ ಮತ್ತು ಅಭಿವೃದ್ಧಿ ನಡುವೆ ನೇರ ಸಂಬಂಧ ಕಲ್ಪಿಸುವ ಚಿಂತನೆ. ಈ ಚಿಂತನೆಯನ್ನು ಪ್ರಶ್ನಿಸುವ ಮತ್ತು ಅಭಿವೃದ್ದಿಯ ಬದಲೀ ಮಾದರಿಯನ್ನು ಮುಂದಿಡುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

**೪. ಸಮಾಜ ಸಂಶೋಧನೆ**

ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಬಹುತೇಕ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಸಮಾಜ ವಿಜ್ಞಾನಗಳನ್ನು ಕಲಿಯುತ್ತಿದ್ದಾರೆ ಮತ್ತು ಸಂಶೋಧನೆ ನಡೆಸುತ್ತಿದ್ದಾರೆ. ಇವರುಗಳು ಸಮಾಜ ವಿಜ್ಞಾನದ ವಿಧಾನದ ಮಾಹಿತಿಗಾಗಿ ಪರದಾಡುವ ಸ್ಥಿತಿ ಇದೆ. ಇಂಗ್ಲೀಷ್ ಭಾಷೆಯಲ್ಲಿರುವ ವಿಧಾನ ಮೇಲಿನ ಪುಸ್ತಕಗಳ ಯಾಂತ್ರಿಕ ಭಾಷಾಂತರಗಳನ್ನು ಆಶ್ರಯಿಸಬೇಕಿದೆ. ಸಂಶೋಧನ ವಿದ್ಯಾರ್ಥಿಗಳ ಈ ಸಮಸ್ಯೆಯನ್ನು ಹೋಗಲಾಡಿಸಿ ಸಮಾಜ ಸಂಶೋಧನೆಯ ವಿಧಿವಿಧಾನಗಳ ಮೇಲಿನ ವಿಮರ್ಶಿತ ನಿಲುವನ್ನು ಪರಿಚಯಿಸುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

**೫. ಸಂಶೋಧಕರ ಸಾಮಾಜಿಕ ಜವಾಬ್ದಾರಿಗಳು**

ಸಮಾಜ ಅರ್ಥ ರಾಜಕೀಯ ಸಂಬಂಧಗಳನ್ನು ಹೊಸ ಬಗೆಯಲ್ಲಿ ರೂಪಿಸಿಕೊಳ್ಳಲ್ಲು ಪೂರಕವಾಗುವ ವಿಚಾರಗಳನ್ನು ಕಟ್ಟಿಕೊಟ್ಟ ಕೂಡಲೇ ಹೊಸ ಸಮಾಜ ನಿರ್ಮಾಣವಾಗುತ್ತದೆಯೇ? ಹೊಸ ಸಮಾಜ ನಿರ್ಮಾಣವಾಗಬೇಕಾದರೆ ಸಂಶೋಧಕರು ಪ್ರತಿಪಾದಿಸುವ ಹೊಸ ಸಾಮಾಜಿಕ ಆರ್ಥಿಕ ರಾಜಕೀಯ ಸಂಬಂಧಗಳಿಗೆ ಜನರ ಬೆಂಬಲ ಹಾಗೂ ಸಂಪನ್ಮೂಲಗಳನ್ನು ಸಂಗ್ರಹಿಸುವ ವಿಧಾನಗಳನ್ನು ಅಧ್ಯಯನಕಾರರು ಶೋಧಿಸಬೇಕಲ್ಲವೇ? ಈ ಎಲ್ಲವನ್ನು ಜನರು ತಮ್ಮದಾಗಿಸಿಕೊಳ್ಳಲು ಪೂರಕವಾಗುವ ಅಥವಾ ಜನರ ಪ್ರಜ್ಞೆಯ ಭಾಗವಾಗಿಸುವ ವಿವಿಧ ಮಾರ್ಗಗಳನ್ನು ಕೂಡ ಸಮಾಜ ಅಧ್ಯಯನಕಾರರು ಶೋಧಿಸಬೇಕಲ್ಲವೇ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

**೬. ಸಂಶೋಧನೆ ಏನು? ಏಕೆ? ಹೇಗೆ? – ಸಂಶೋಧನ ವಿಧಿವಿಧಾನಗಳ ಅಧ್ಯಯನ**

ಸಂಶೋಧನ ಅಂದರೇನು? ಏಕೆ ಸಂಶೋಧನೆ ನಡೆಸಬೇಕು? ಮತ್ತು ಹೇಗೆ ಸಂಶೋಧನೆ ಮಾಡಬೇಕು? ಎನ್ನುವ ಪ್ರಶ್ನೆಗಳಿಗೆ ಈ ಅಧ್ಯಯನದಲ್ಲಿ ಉತ್ತರಿಸಲಾಗಿದೆ. ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನವನ್ನು ವಿಮರ್ಶಿಸುತ್ತಾ ಬದಲೀ ವ್ಯಾಖ್ಯಾನವನ್ನು ಮುಂಚೂಣಿಗೆ ತರುವುದು, ಈ ಬದಲೀ ವ್ಯಾಖ್ಯಾನಕ್ಕೆ ಪೂರಕವಾದ ವೈಧಾನಿಕತೆಯನ್ನು ಕಂಡುಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶಗಳು.



PDF created with pdfFactory trial version www.pdffactory.com

೧೪. ಪ್ರಗತಿಯಲ್ಲಿರುವ ಯೋಜನೆಗಳು

**೧. ವಸಾಹತ್ತೋತರ ಕರ್ನಾಟಕದ ಅಭಿವೃದ್ಧಿ ರಾಜಕಾರಣ**

ಕರ್ನಾಟಕದ ಅಭಿವೃದ್ಧಿ ನೀತಿ, ರಾಜಕೀಯ ಮತ್ತು ಆಡಳಿತವನ್ನು ವಿಶ್ಲೇಷಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ. ಕರ್ನಾಟಕದ ಅಭಿವೃದ್ಧಿಯನ್ನು ಬಿಂಬಿಸುವ ಅಧ್ಯಯನಗಳ ಬಹುದೊಡ್ಡ ಕೊರತೆಯೆಂದರೆ ಇವುಗಳು ಅಭಿವೃದ್ಧಿಯನ್ನು ಆರ್ಥಿಕ ಕ್ಷೇತ್ರಕ್ಕೆ ಸೀಮಿತವಾಗಿ ನೋಡುತ್ತವೆ. ಅಭಿವೃದ್ಧಿ ಮತ್ತು ರಾಜಕೀಯದ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದಿಲ್ಲ. ಈ ಅಧ್ಯಯನ ಕರ್ನಾಟಕದ ಅಭಿವೃದ್ಧಿ ರಾಜಕಾರಣವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ.

**೨. ಬಡತನದ ವಿಶ್ಲೇಷಣೆ**

ಹಲವಾರು ದಶಕಗಳಿಂದ ಬಡತನ ನಿವಾರಣ ಕಾರ್ಯಕ್ರಮಗಳು ನಮ್ಮಲ್ಲಿ ನಡೆಯುತ್ತಲೇ ಇವೆ. ಆದಾಗ್ಯೂ ಬಡತನ ಕಡಿಮೆಯಾಗಿಲ್ಲ. ಯಾಕೆ ಬಡತನ ಕಡಿಮೆಯಾಗಿಲ್ಲ? ಬಡತನ ಕಡಿಮೆಯಾಗಬೇಕಾದರೆ ಏನು ಮಾಡಬೇಕು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗುವುದು.

**೩. ಸೋಶಿಯಲ್ ಕ್ಯಾಪಿಟಲ್, ಇನ್‌ಸ್ಟಿಟ್ಯುಶನ್ ಆಂಡ್ ಡೆವಲಪ್‌ಮೆಂಟ್**

ಸೋಶಿಯಲ್ ಕ್ಯಾಪಿಟಲ್, ಪಂಚಾಯತ್ಸ್ ಆಂಡ್ ರೂರಲ್ ಡೆವಲಪ್‌ಮೆಂಟ್ ಎನ್ನುವ ಯುಜಿಸಿ ಮೇಜರ್ ರಿಸರ್ಚ್ ಯೋಜನೆಯ ವರದಿಯನ್ನು ಪುಸ್ತಕ ತರುವುದು ಈ ಯೋಜನೆಯ ಉದ್ದೇಶ.

೧೫. ಪ್ರಕಟಣೆಗಳು

೧೫.೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು

**೧. ಪರಿಸರ ಮತ್ತು ಅಭಿವೃದ್ಧಿ**

ಸ್ವಾತಂತ್ರ್ಯ ನಂತರ ನಾವು ಹಮ್ಮಿಕೊಂಡಿರುವ ಅಭಿವೃದ್ಧಿ ಮಾದರಿಯಲ್ಲಿ ಪರಿಸರ ಸಮಸ್ಯೆ ಅಂತರ್‌ಗತಗೊಂಡಿದೆಯೇ? ಪರಿಸರ ನಾಶ ಮತ್ತು ಅಭಿವೃದ್ಧಿ ನಡುವೆ ನೇರ ಸಂಬಂಧ ಇದೆಯೇ? ನಾವು ಅನುಸರಿಸುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳ ತಾತ್ವಿಕ ಹಿನ್ನೆಲೆಯೇನು? ಇವೇ ಮುಂತಾದ ಪ್ರಶ್ನೆಗಳಿಗೆ ಈ ಪುಸ್ತಕ ಉತ್ತರಿಸುತ್ತದೆ.

**೨. ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ**

ವಿಕೇಂದ್ರೀಕರಣವನ್ನು ವಿವಿಧ ತಾತ್ವಿಕ ಚಿಂತನೆಗಳು ಮುಂಚೂಣಿಗೆ ತರುತ್ತಿವೆ. ತಾಂತ್ರಿಕ ಆಧುನೀಕರಣಕ್ಕೆ ಬದ್ದರಾದವರು ವಿಕೇಂದ್ರೀಕರಣವನ್ನು ಕಡಿಮೆ ವೆಚ್ಚದಲ್ಲಿ ಅಭಿವೃದ್ಧಿ ಸವಲತ್ತುಗಳನ್ನು ತಳವರ್ಗಕ್ಕೆ ಪೂರೈಕೆ ಮಾಡುವ ಸಂಸ್ಥೆಯ ರೂಪದಲ್ಲಿ ನೋಡುತ್ತಾರೆ. ಸಮುದಾಯವಾದಿಗಳು ವಿಕೇಂದ್ರೀಕರಣವನ್ನು ನಮ್ಮ ಬಹುರೂಪಿ ಸಮಾಜದ ಬಹುರಾಜಕೀಯ ಆಶಯಗಳನ್ನು ಅಭಿವ್ಯಕ್ತಗೊಳಿಸುವ ವ್ಯವಸ್ಥೆಯ ದೃಷ್ಟಿಯಿಂದ ನೋಡುತ್ತಾರೆ. ಮತ್ತೆ ಕೆಲವರು ಪ್ರಜಾಪ್ರಭುತ್ವವನ್ನು ಆಳಕ್ಕೆ ಒಯ್ಯುವ ಪ್ರಕ್ರಿಯೆಯ ರೂಪದಲ್ಲಿ ವಿಕೇಂದ್ರೀಕರಣವನ್ನು ನೋಡುತ್ತಾರೆ. ಈ ಎಲ್ಲ ತಾತ್ವಿಕ ಹಿನ್ನೆಲೆಯಿಂದ ರೂಪಿತ ಚಿಂತನೆಗಳ ದೃಷ್ಟಿಯಿಂದ ಪಂಚಾಯತ್ತೊಂದರಲ್ಲಿ ವಿಕೇಂದ್ರೀಕರಣ ಅಭಿವ್ಯಕ್ತಗೊಂಡ ಬಗೆಯನ್ನು ಈ ಪುಸ್ತಕ ವಿವರಿಸುತ್ತದೆ.

**೩. ಸ್ವದೇಶಿ ಒಂದು ವಿಶ್ಲೇಷಣೆ**

ಜಾಗತೀಕರಣಕ್ಕೆ ಹಲವಾರು ಪ್ರಕ್ರಿಯೆಗಳು ಬಂದಿವೆ. ಅವುಗಳಲ್ಲಿ ಒಂದು ಸ್ವದೇಶಿ ಚಳವಳಿ. ಇದು ಗಾಂಧೀಜಿಯವರು ಬ್ರಿಟಿಷರ ವಿರುದ್ಧ ನಡೆಸಿದ ಸ್ವದೇಶಿ ಚಳವಳಿಯಲ್ಲ. ಕಾಂಗ್ರೆಸ್ ಪಕ್ಷ ಉದಾರೀಕರಣ ಆರ್ಥಿಕ ನೀತಿಯನ್ನು ತಂದಾಗ ಬಿಜೆಪಿ ಪಕ್ಷ ತನ್ನ ಆರ್ಥಿಕ ನೀತಿಗಳು ಕಾಂಗ್ರೆಸ್ ಪಕ್ಷದ ಆರ್ಥಿಕ ನೀತಿಗಳಿಗಿಂತ ಎಷ್ಟು ಭಿನ್ನ ಎಂದು ತೋರಿಸಲು ಪ್ರಾರಂಭಿಸಿದ ಚಳವಳಿ. ಬಿಜೆಪಿಯವರ ಸ್ವದೇಶಿ ಚಳವಳಿ ಎಷ್ಟು ಟೊಳ್ಳೆಂದು ಈ ಪುಸ್ತಕ ವಿವರಿಸುತ್ತದೆ.

**೪. ಜಂಟೀ ಅರಣ್ಯ ನಿರ್ವಹಣೆ**

ಸ್ಥಳೀಯ ಸಮುದಾಯಗಳ ಸಹಭಾಗಿತ್ವದೊಂದಿಗೆ ಅರಣ್ಯವನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಜಂಟೀ ಅರಣ್ಯ ಯೋಜನೆಯ ಉದ್ದೇಶ. ಇದೊಂದು ಅರಣ್ಯ ಇಲಾಖೆ ಹಾಗೂ ಸ್ಥಳೀಯ ಜನರ ನಡುವೆ ಜವಾಬ್ದಾರಿ, ಅಧಿಕಾರ ಹಾಗೂ ಅರಣ್ಯ ಉತ್ಪನ್ನಗಳಲ್ಲಿ ಸಮಪಾಲು ಇರುವ ಸಹಭಾಗಿತ್ವ ಯೋಜನೆ. ಜಂಟೀ ಅರಣ್ಯ ಸಮಿತಿಗಳು ಕಾರ್ಯರೂಪಕ್ಕೆ ತಂದಿರುವ ಸಹಭಾಗಿತ್ವವನ್ನು ಈ ಪುಸ್ತಕ ವಿವರಿಸುತ್ತದೆ.

**೫. ಸಮಾಜ ಸಂಶೋಧನೆ**



PDF created with pdfFactory trial version www.pdffactory.com

ಸಮಾಜ ಸಂಶೋಧನೆ ಮೇಲೆ ಬರೆದ ಲೇಖನಗಳ ಸಂಗ್ರಹ ಈ ಪುಸ್ತಕ. ಪುಸ್ತಕದ ಮೊದಲ ನಾಲ್ಕು ಅಧ್ಯಾಯಗಳಲ್ಲಿ ಸಮಾಜ ಸಂಶೋಧನೆಯ ತಾತ್ವಿಕಾಂಶಗಳನ್ನು ವಿವರಿಸಲಾಗಿದೆ. ಉಳಿದ ಅಧ್ಯಾಯಗಳಲ್ಲಿ ಸಂಶೋಧನೆಯ ವೈಧಾನಿಕತೆಯನ್ನು ವಿಮರ್ಶಿಸಲಾಗಿದೆ. ಸಮಾಜ ಸಂಶೋಧನೆ ವಿಜ್ಞಾನದ ವಿಧಾನವನ್ನು ಬಳಸಿಕೊಂಡು ಬೆಳೆದ ಶಾಸ್ತ್ರ. ಇದರಿಂದಾಗಿ ವಿಜ್ಞಾನದ ವಿಧಾನದ ಹಲವಾರು ಗುಣಗಳು ಸಮಾಜ ಥಿಯರಿಗಳಲ್ಲಿ ಅಂತರ್ಗತವಾಗಿವೆ. ವಿಜ್ಞಾನದ ವಿಧಾನವನ್ನು ಅನುಸರಿಸುವ ಮೂಲಕ ಸಮಾಜ ವಿಜ್ಞಾನ ಹೇಗೆ ತನ್ನ ವಿಧಾನ, ಕ್ಷೇತ್ರ, ವ್ಯಾಪ್ತಿ ಇತ್ಯಾದಿಗಳನ್ನು ನಿವರ್ಚಿಸಿಕೊಂಡಿತು ಮತ್ತು ಇದು ಹೇಗೆ ಸಮಾಜ ವಿಜ್ಞಾನದ ವ್ಯಾಪ್ತಿಯನ್ನು ಸೀಮಿತಗೊಳಿಸಿತು ಎನ್ನುವ ವಿಶ್ಲೇಷಣೆಯನ್ನು ಪುಸ್ತಕ ಒಳಗೊಂಡಿದೆ.

**೬. ಸಂಶೋಧನ ಜವಾಬ್ದಾರಿ**

ಸಮಾಜ ಅರ್ಥ ರಾಜಕೀಯವನ್ನು ಹೊಸಬಗೆಯಲ್ಲಿ ಕಟ್ಟಿಕೊಳ್ಳಲು ಪೂರಕವಾಗುವ ಜ್ಞಾನವನ್ನು ಸೃಷ್ಟಿಸುವುದು ಮಾತ್ರ ಸಂಶೋಧಕರ ಜವಾಬ್ದಾರಿಯಲ್ಲ, ಸಂಶೋಧಕರು ಸೃಷ್ಟಿಸಿದ ಜ್ಞಾನವನ್ನು ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಿಸುವ ವಿಧಾನಗಳನ್ನು ಶೋಧಿಸುವುದು ಕೂಡ ಸಂಶೋಧಕರ ಜವಾಬ್ದಾರಿಯೆಂದು ಈ ಪುಸ್ತಕ ವಾದಿಸುತ್ತದೆ.

**೭. ಸಂಶೋಧಕರು ಮತ್ತು ಕ್ಷೇತ್ರಕಾರ್ಯ**

ಈ ಪುಸ್ತಕದಲ್ಲಿ ಮಾಹಿತಿ ಸಂಗ್ರಹಿಸುವ ವಿಧಾನಗಳಿಗೆ ಸಂಬಂಧಿಸಿದ ಪ್ರಮುಖ ಮೂರು ಸಂಗತಿಗಳನ್ನು ಚರ್ಚಿಸಲಾಗಿದೆ. ಮಾಹಿತಿ ಸಂಗ್ರಹ ವಿಧಾನಗಳ ತಾತ್ವಿಕ ಹಿನ್ನೆಲೆ, ಮಾಹಿತಿ ಸಂಗ್ರಹ ಕೆಲಸದಲ್ಲಿ ಸಂಶೋಧಕರು ಎದುರಿಸಬೇಕಾದ ಸಮಸ್ಯೆಗಳು ಹಾಗೂ ವಿಧಾನಗಳ ಅನುಕೂಲತೆಗಳು ಮತ್ತು ಅನಾನುಕೂಲತೆಗಳ ಕುರಿತ ಚರ್ಚೆ ಈ ಪುಸ್ತಕ ಮುಖ್ಯ ವಸ್ತು.

**೮. ಸಂಶೋಧನ ಪ್ರಸ್ತಾವ**

ಸಂಶೋಧನ ವಿಷಯ ಆಯ್ಕೆ ಹಾಗೂ ಸಂಶೋಧನ ಪ್ರಸ್ತಾವ ರಚನೆ ಆರಂಭಿಕ ಸಂಶೋಧಕರನ್ನು ಕಾಡುವ ಎರಡು ಮುಖ್ಯ ಸಮಸ್ಯೆಗಳು. ಈ ಪುಸ್ತಕದ ಮೊದಲ ಭಾಗದಲ್ಲಿ ಸಂಶೋಧನ ವಿಷಯ ಆಯ್ಕೆಯ ಸಂದರ್ಭದಲ್ಲಿ ಪರಿಗಣಿಸಬೇಕಾದ ಮುಖ್ಯ ಅಂಶಗಳನ್ನು ವಿವರಿಸಲಾಗಿದೆ. ಎರಡನೇ ಭಾಗದಲ್ಲಿ ಸಂಶೋಧನ ಪ್ರಸ್ತಾವದ ವಿವಿಧ ಹಂತಗಳನ್ನು ಉದಾಹರಣೆ ಸಮೇತ ವಿವರಿಸಲಾಗಿದೆ.

**೯. ಕರಾವಳಿ ಕರ್ನಾಟಕದ ಕೋಮುವಾದ**

ಎಲ್ಲ ರೀತಿಯಿಂದಲೂ ಆಧುನೀಕರಣಗೊಂಡ ಕರಾವಳಿ ಕರ್ನಾಟಕದಲ್ಲಿ ಸುಮಾರು ಇಪ್ಪತ್ತು ವರ್ಷಗಳಿಂದ ಕೋಮುವಾದ ಬೆಳೆಯುತ್ತಲೇ ಇದೆ. ಒಂದು ಕಾಲದಲ್ಲಿ ಕೇವಲ ನಗರ ಪ್ರದೇಶಗಳಿಗೆ ಸೀಮಿತವಾದ ಕೋಮುಗಲಭೆಗಳು ಇಂದು ಸಣ್ಣ ಪುಟ್ಟ ಪೇಟೆಗಳಿಗೂ ಹಬ್ಬಿದೆ. ಅಷ್ಟು ಮಾತ್ರವಲ್ಲ ಇಂದು ಇಡೀ ಕರಾವಳಿ ಪ್ರದೇಶದಲ್ಲಿ ಹಿಂದುಗಳನ್ನು ನೋಡಬಹುದು. ಮುಸ್ಲಿಮರನ್ನು ನೋಡಬಹುದು. ಕ್ರಿಶ್ಚಿಯನ್ನರನ್ನು ನೋಡಬಹುದು. ಆದರೆ ಮನುಷ್ಯರನ್ನು ನೋಡಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಈ ಪ್ರದೇಶದಲ್ಲಿ ಕೋಮುವಾದ ಈ ಪ್ರಮಾಣದಲ್ಲಿ ಬೆಳೆಯಲು ಕಾರಣವಾಗಿರುವ ಅಂಶಗಳನ್ನು ಪುಸ್ತಕ ಚರ್ಚಿಸುತ್ತಿದೆ.

**೧೦. ಸಂಶೋಧನೆ ಏನು? ಏಕೆ? ಹೇಗೆ?**

ಸಂಶೋಧನೆಯ ಸಾಂಪ್ರದಾಯಿಕ ದೃಷ್ಟಿಕೋನಗಳನ್ನು ಬದಲಾಯಿಸಲು ಪೂರಕವಾಗುವ ಸಾಕಷ್ಟು ನೆಲೆಗಳನ್ನು ಈ ಪುಸ್ತಕದಲ್ಲಿ ಚರ್ಚಿಸಲಾಗಿದೆ. ಸಂಶೋಧನೆಯನ್ನು ವಾದ/ಸತ್ಯದ ಪ್ರತಿಪಾದನೆಯೆಂದು ವ್ಯಾಖ್ಯಾನಿಸಲಾಗಿದೆ. ಈಗಾಗಲೇ ಸ್ಥಾಪಿತವಾದ ವಾದ/ಸತ್ಯಗಳೊಂದಿಗೆ ಸಂವಾದ ನಡೆಸಿ ಹೊಸ ಸತ್ಯ/ವಾದಗಳನ್ನು ಪ್ರತಿಪಾದಿಸಲಾಗುವುದು. ಇಲ್ಲಿ ವಸ್ತುನಿಷ್ಠತೆಯನ್ನು ಪ್ರಶ್ನೆಯನ್ನು ಊಹೆಗಳ ಪರೀಕ್ಷೆಯ ನೆಲೆಯಲ್ಲಿ ನಿರ್ಧಸುವುದಲ್ಲ. ಲೋಕಲ್ ಹಾಗೂ ಗ್ಲೋಬಲ್ ಸತ್ಯಗಳೊಂದಿಗೆ ಸಂವಾದ ನಡೆಸಿ ಸತ್ಯ/ವಾದ ಪ್ರತಿವಾದನೆ ಮಾಡುವುದು ವಸ್ತು ನಿಷ್ಠೆಯತೆಯ ಪರೀಕ್ಷೆ. ಇಂತಹ ಸಂಶೋಧನೆಯನ್ನು ನಡೆಸಲು ಅನುಸರಿಸಬೇಕಾದ ವಿಧಾನವನ್ನು ಪುಸ್ತಕ ವಿವರಿಸುತ್ತದೆ.

**೧೫.೨.ವೈಯಕ್ತಿಕ ಪ್ರಕಟಿತ ಕೃತಿಗಳು**

**ರಾಜಕೀಯ ಬಡತನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೮**

ಕರ್ನಾಟಕದ ಪೊಲಿಟಿಕಲ್ ಎಕನಾಮಿಯಲ್ಲಿನ ಲೋಪದೋಷಗಳನ್ನು ಗುರುತಿಸಿ ವಿಮರ್ಶಿಸುವ ಪ್ರಯತ್ನವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ. ಸಮಾಜದ ಬಹುತೇಕರು ಸುಖನೆಮ್ಮದಿಯಿಂದ ಬದುಕಲು ಪೂರಕವಾಗುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಂಸ್ಥೆಗಳನ್ನು, ಸಂಬಂಧಗಳನ್ನು ಹಾಗೂ ಮೌಲ್ಯಗಳನ್ನು ರೂಪಿಸುವುದು. ರಾಜಕೀಯದ ಜವಾಬ್ದಾರಿ, ವಾಸ್ತವದಲ್ಲಿ ರಾಜಕೀಯ ಸಮಷ್ಠಿಯ ಏಳಿಗೆಯನ್ನು ಸಾಧಿಸುವ ರೂಪದಲ್ಲಿ ಇದೆಯೇ? ಇಲ್ಲವಾದರೆ ಯಾಕಿಲ್ಲ? ಸಮಾಜದ ಯಾವ ವರ್ಗದ ಹಿತಾಸಕ್ತಿಗಳನ್ನು ರಾಜಕೀಯ ಪೂರೈಸುತ್ತಿವೆ? ಸಮಾಜದ



PDF created with pdfFactory trial version www.pdffactory.com

ಬಹುತೇಕರ ಆಶಯಗಳನ್ನು ಯಾಕೆ ರಾಜಕೀಯಕ್ಕೆ ಪೂರೈಸಲಾಗುತ್ತಿಲ್ಲ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಪುಸ್ತಕದಲ್ಲಿ ಪ್ರಯತ್ನಿಸಿದ್ದೇನೆ.

**೧೫.೩. ಸಂಪಾದಿತ ಕೃತಿಗಳು**

**ಸಮುದಾಯ ಮತ್ತು ಸಹಭಾಗಿತ್ವತ**

ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ಕುರಿತ ಎರಡು ದಿನಗಳ ವಿಚಾರ ಸಂಕಿರಣವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗ ಮತ್ತು ಶಿವಮೊಗ್ಗದ ಇತಿಹಾಸ ವೇದಿಕೆ ಜಂಟಿಯಾಗಿ ಸಂಯೋಜಿಸಿದ್ದವು. ಈ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ಸಮುದಾಯ ಮತ್ತು ಸಹಭಾಗಿತ್ವ ಎನ್ನುವ ಪುಸ್ತಕದಲ್ಲಿ ಪ್ರಕಟಿಸಲಾಗಿದೆ.

**೧೬. ಪ್ರಕಟಿತ ಪ್ರಮುಖ ೧೦ ಲೇಖನಗಳು**

**೧. ಸ್ಮಾಲ್ ಸ್ಕೇಲ್ ಸೆಕ್ಟರ್ ಮಿಥ್ ಆಂಡ್ ರಿಯಾಲಿಟಿ, ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್ ೩೧, ನಂ.೨೧, ಮೇ ೧೯೯೬**

ಮಧ್ಯಮ ಹಾಗೂ ಬೃಹತ್ ಉದ್ದಿಮೆಗಳನ್ನು ದೊಡ್ಡ ಬಂಡವಾಳಿಗಳು ಮಾತ್ರ ಆರಂಭಿಸಲು ಸಾಧ್ಯ. ದೊಡ್ಡ ಬಂಡವಾಳಿಗಳು ಬೆಳೆಯಬೇಕಾದರೆ ಸಣ್ಣ ಉದ್ದಿಮೆಗಳು ಬೆಳೆಯಬೇಕು. ಈ ಉದ್ದೇಶವನ್ನಿಟ್ಟುಕೊಂಡು ಸರಕಾರ ಸಣ್ಣ ಉದ್ದಿಮೆಗಳನ್ನು ಪ್ರೋತ್ಸಾಹಿಸಿತು. ಆದರೆ ವಾಸ್ತವದಲ್ಲಿ ಸಣ್ಣ ಉದ್ದಿಮೆಗಳು ಉದ್ದೇಶಿತ ರೂಪದಲ್ಲಿ ಬೆಳೆಯಲ್ಲಿಲ್ಲ ಎಂದು ಈ ಲೇಖನ ವಾದಿಸುತ್ತಿದೆ.

**೨. ವಾಟ್ ಕ್ರಿಯೇಟ್ಸ್ ಏನ್ ಎಂಟರ್‌ಪ್ರನರ್ ಸಮ್ ಒಬ್ಬರವೇಶನ್ಸ್ ಫ್ರೊಮ್ ಎ ಮೈಕ್ರೋ ಸ್ಟಡಿ, ದಿ ಜರ್ನಲ್ ಆಫ್ ಎಂಟರ್ ಪ್ರನರ್ ಶಿಪ್ ವಾಲ್ಯೂಮ್ ೧೫, ನಂ.೨, ಜುಲೈ ೧೯೯೬**

ಉದ್ದಿಮೆಶೀಲತೆ ಅಥವಾ ಯಾರು ಉದ್ದಿಮೆದಾರರಾಗುತ್ತಾರೆ ಎನ್ನುವುದರ ಬಗ್ಗೆ ಹಲವಾರು ಥಿಯರಿಗಳಿವೆ. ಸಾಧಿಸಬೇಕೆನ್ನುವ ಛಲ ಇದ್ದವರು ಉದ್ದಿಮೆದಾರರಾಗುತ್ತಾರೆ ಎಂದು ಕೆಲವರು ಹೇಳಿದರೆ ಮತ್ತೆ ಕೆಲವರ ಪ್ರಕಾರ ಸಮಾಜ ವಿಧಿಸುವ ಕಟ್ಟುಪಾಡುಗಳನ್ನು ಮೀರಿ ಬಾಳುವವರು ಉದ್ದಿಮೆದಾರರಾಗುತ್ತಾರೆ. ಇನ್ನು ಕೆಲವರ ಪ್ರಕಾರ ಒಂದು ಕಾಲದಲ್ಲಿ ಸಮಾಜದ ಮೇಲ್‌ಸ್ತರದಲ್ಲಿದ್ದು ಕಾಲಕ್ರಮೇಣ ತಮ್ಮ ಸ್ಥಾನಮಾನ ಕಳೆದುಕೊಂಡವರು ಪುನಃ ತಮ್ಮ ಹಿಂದಿನ ಸ್ಥಾನಮಾನಗಳನ್ನು ಪಡೆಯಲು ಉದ್ದಿಮೆದಾರರಾಗುತ್ತಾರೆ ಎನ್ನುವ ಅಭಿಪ್ರಾಯ ಇದೆ. ದಕ್ಷಿಣ ಕನ್ನಡ ಜಿಲ್ಲೆಯ ಉದ್ದಿಮೆದಾರರ ಹಿನ್ನೆಲೆಯನ್ನು ಅಧ್ಯಯನ ಮಾಡುವ ಮೂಲಕ ಈ ಎಲ್ಲ ತಾತ್ವಿಕ ಹಿನ್ನೆಲೆಗಳನ್ನು ಈ ಲೇಖನದಲ್ಲಿ ಪರೀಕ್ಷಿಸಲು ಪ್ರಯತ್ನಿಸಿದ್ದೇನೆ.

**೩. ಫೋರ್ಮ್ಡ್/ಕನ್‌ಸ್ಟ್ರಕ್ಟೆಡ್ ಕಮ್ಯುನಿಟೀಸ್ ಆಂಡ್ ಕಮ್ಯುನಲಿಸಂ ಎ ಸ್ಟಡಿ ಆಫ್ ಗ್ರೋಥ್ ಆಫ್ ಕಮ್ಯುನಲಿಸಂ ಇನ್ ಕೋಸ್ಟಲ್ ಕರ್ನಾಟಕ, ಇಂಡಯನ್ ಜರ್ನಲ್ ಆಫ್ ಸೆಕ್ಯುಲರಿಸಂ, ವಾಲ್ಯೂಮ್ ೧೪, ನಂ.೧, ಏಪ್ರಿಲ್ ಜೂನ್ ೨೦೦೦**

ದಕ್ಷಿಣ ಕನ್ನಡದಲ್ಲಿ ಬೆಳೆಯುತ್ತಿರುವ ಕೋಮುವಾದವನ್ನು ಅರ್ಥ ಮಾಡಿಕೊಳ್ಳಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ. ಸಮುದಾಯ ರೂಪುಗೊಳ್ಳುವ ಎರಡು ತಾತ್ವಿಕ ಹಿನ್ನೆಲೆಗಳಿಂದ–ಚಾರಿತ್ರಿಕವಾಗಿ ರೂಪುಗೊಂಡ ಸಮುದಾಯಗಳು ಹಾಗೂ ಸಂಕಥನಗಳ ಮೂಲಕ ಕಟ್ಟಿಕೊಳ್ಳುವ ಸಮುದಾಯಗಳು– ದಕ್ಷಿಣ ಕನ್ನಡದ ಕೋಮುವಾದವನ್ನು ಅಧ್ಯಯನ ಮಾಡಿ ವಿವರಿಸಲಾಗಿದೆ.

**೪. ಪಾರ್ಟಿಸಿಪೇಟರಿ ಪ್ಲಾನಿಂಗ್ ಸಮ್ ಒಬ್ಸರ್‌ವೇಶನ್ಸ್ ಫ್ರೋಮ್ ಟು ಕೇಸ್ ಸ್ಟಡೀಸ್, ಜರ್ನಲ್ ಆಫ್ ಕರ್ನಾಟಕ ಸ್ಟಡೀಸ್ ವಾಲ್ಯೂಮ್ ೧, ನಂ.೨, ಡಿಸೆಂಬರ್ ೨೦೦೪**

ಜನರ ಸಹಭಾಗಿತ್ವದೊಂದಿಗೆ ಪಂಚಾಯತ್ ಮಟ್ಟದಿಂದಲೇ ಯೋಜನೆ ಸಿದ್ಧವಾಗಬೇಕೆನ್ನುವುದು ೧೯೯೩ರ ಸಂವಿಧಾನದ ೭೩ನೇ ತಿದ್ದುಪಡಿಯ ಬಹುಮುಖ್ಯ ಆಶಯ. ಎರಡು ಪಂಚಾಯತ್‌ಗಳಲ್ಲಿ ಜನರ ಸಹಭಾಗಿತ್ವದೊಂದಿಗೆ ಪಂಚಾಯತ್ ಯೋಜನೆ ಸಿದ್ಧಪಡಿಸಿದಾಗ ಆದ ಅನುಭವವನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

**೫. ಸ್ಮಾಲ್ ಎಂಟರ್‌ಪ್ರನರ್ ಆಂಡ್ ಡೆವಲಪ್‌ಮೆಂಟ್ ಎ ಕ್ರಿಟಿಕ್ ಆಫ್ ರಿಸೀವ್ಡ್ ಇಮೇಜಸ್ ಆಫ್ ಇಂಟರ್‌ಪ್ರನರ್, ಮೇನ್ ಆಂಡ್ ಡೆವಲಪ್‌ಮೆಂಟ್, ವಾಲ್ಯೂಮ್ ೨೦, ನಂ.೪, ಡಿಸೆಂಬರ್ ೧೯೯೮**

ಉದ್ಯಮಶೀಲತೆ ನಮ್ಮಲ್ಲಿ ಕೆಲವೇ ಕೆಲವು ಸಮುದಾಯಗಳಲ್ಲಿ ಕ್ರೋಢಿಕೃತವಾಗಿತ್ತು. ಇಂತಹ ಸ್ಥಿತಿಯನ್ನು ಬದಲಾಯಿಸಿ ಸಮಾಜದ ಎಲ್ಲ ವರ್ಗಗಳಿಂದಲೂ ಉದ್ದಿಮೆದಾರರು ರೂಪಕೊಳ್ಳಬೇಕೆನ್ನುವ ಆಶಯದಿಂದ ಸಣ್ಣ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡಲಾಯಿತು. ಆದರೆ ವಾಸ್ತವದಲ್ಲಿ ಸಣ್ಣ ಉದ್ದಿಮೆದಾರರು ಕೂಡ ವ್ಯಾಪಾರಿ ಸಮುದಾಯಗಳಿಂದ



PDF created with pdfFactory trial version www.pdffactory.com

ಹಾಗೂ ಸ್ಥಳೀಯ ಮೇಲ್ವರ್ಗಗಳಿಂದ ಹೆಚ್ಚು ಪ್ರಮಾಣದಲ್ಲಿ ಬಂದಿದ್ದಾರೆ. ಯಾಕೆ ಹೀಗಾಯಿತ್ತೆನ್ನುವುದರ ವಿವರ ಈ ಲೇಖನದಲ್ಲಿದೆ.

**೬. ಸೋಶಿಯಲ್ ಕ್ಯಾಪಿಟಲ್ ಅಭಿವೃದ್ಧಿಯ ಹೊಸ ಮಿಸ್ಸಿಂಗ್ ಲಿಂಕೇ, ಅಭಿವೃದ್ಧಿ ಅಧ್ಯಯನ, ವಾಲ್ಯೂಮ್ ೧, ನಂ.೨, ಜೂನ್ ೨೦೦೨**

ಒಂದು ಕಾಲದಲ್ಲಿ ಬಂಡವಾಳ, ತಂತ್ರಜ್ಞಾನ, ಉದ್ದಿಮೆ ಶೀಲತೆ ಇತ್ಯಾದಿಗಳು ಅಭಿವೃದ್ಧಿಯ ಮಿಸ್ಸಿಂಗ್ ಲಿಂಕ್ ಆಗಿ ಕೆಲಸ ಮಾಡಿವೆ. ಇಂದು ಸೋಶಿಯಲ್ ಕ್ಯಾಪಿಟಲ್ ಅಭಿವೃದ್ಧಿಯ ಹೊಸ ಮಿಸ್ಸಿಂಗ್ ಲಿಂಗ್ ಆಗಿದೆ. ಸೋಶಿಯಲ್ ಕ್ಯಾಪಿಟಲ್ ಇಂದು ಯಾಕೆ ಮತ್ತು ಹೇಗೆ ಹೊಸ ಮಿಸ್ಸಿಂಗ್ ಲಿಂಕೌ ಆಗಿದೆ. ನಮ್ಮಂತಹ ಬಡದೇಶದಲ್ಲಿ ಅದರ ಅನ್ವಯಿಕೆ ಹೇಗಿರಬಹುದು ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ.

**೭. ಸಂಶೋಧನೆ ಮತ್ತು ಸಾಮಾಜಿಕ ಪರಿವರ್ತನೆ, ಅಭಿವೃದ್ಧಿ ಅಧ್ಯಯನ, ವಾಲ್ಯೂಮ್ ೨, ನಂ.೨, ಜೂನ್ ೨೦೦೩**

ಸಮಾಜವನ್ನು ಬದಲಾಯಿಸುವ ಉದ್ದೇಶದಿಂದ ಸಮಾಜವನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆ ಸಂಶೋಧನೆ ಎನ್ನುವುದು ಸಂಶೋಧನೆಯ ಒಂದು ವ್ಯಾಖ್ಯಾನ. ಆದರೆ ಇಂದು ಸಮಾಜವನ್ನು ಬದಲಾಯಿಸುವ ಸಂಶೋಧನೆಯ ಗುಣವನ್ನು ನಿರಾಕರಿಸುವ ಹಲವಾರು ವಾದಗಳು ಪ್ರಚಾರದಲ್ಲಿವೆ. ಅವುಗಳಲ್ಲಿ ತುಂಬಾ ಪ್ರಚಾರದಲ್ಲಿರುವ ಕೆಲವು ವಾದಗಳನ್ನು–ಸಂಶೋಧನೆಯ ವ್ಯಾಖ್ಯಾನವನ್ನು ಜ್ಞಾನದ ಉತ್ಪಾದನೆ ಎಂದು ಬದಲಾಯಿಸಿಕೊಳ್ಳುವುದು, ಬಹುಸತ್ಯ ಮತ್ತು ಬಹುಸುಖದ ಕಲ್ಪನೆಗಳನ್ನು ಮುಂದಿಡುವುದು, ಬದಲಾವಣೆಬೇಕೆಂದು ವಾದಿಸುವವರ ಹಿನ್ನೆಲೆಯನ್ನು ಪ್ರಶ್ನಿಸುವುದು ಇತ್ಯಾದಿಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**೮. ಸಮಾಜ ವಿಜ್ಞಾನದಲ್ಲಿನ ವಿಜ್ಞಾನ ಕುರಿತು ಕೆಲವು ಟಿಪ್ಪಣಿಗಳು, ಬುಡಕಟ್ಟು ಅಧ್ಯಯನ, ವಾಲ್ಯೂಮ್ ೧, ನಂ.೧, ಜೂನ್ ೨೦೦೪**

ಸಮಾಜ ವಿಜ್ಞಾನ ಒಂದು ಶಿಸ್ತು ಬದ್ಧ ಶಾಸ್ತ್ರವಾಗಿ ರೂಪುಗೊಳ್ಳುವಲ್ಲಿ ವಿಜ್ಞಾನದ ವಿಧಾನದ ಪಾತ್ರವನ್ನು ಅಲ್ಲಗೆಳೆಯುವಂತಿಲ್ಲ. ಆದರೆ ಇಂದು ವಿಜ್ಞಾನದ ವಿಧಾನ ಎಲ್ಲ ಕಡೆಯಿಂದಲೂ ಟೀಕೆಗೆ ಒಳಗಾಗುತ್ತಿದೆ. ಅವುಗಳಲ್ಲಿ ಬಹು ಮುಖ್ಯವಾದವು ಮತ್ತು ಸಮಾಜ ವಿಜ್ಞಾನದ ಸಂಶೋಧನೆಯಲ್ಲಿ ಪ್ರಭಾವ ಬೀರುವ ಕೆಲವು ಸಂಗತಿಗಳು ಇಂತಿವೆ. ಒಂದು, ಒಬ್ಜೆಕ್ಟಿವಿಟಿ ಅಥವಾ ಅಲ್ಟಿಮೇಟ್ ಸತ್ಯದ ಕಲ್ಪನೆ, ಎರಡು, ವ್ಯಾಲ್ಯೂ ನ್ಯೂಟ್ರಾಲಿಟಿಯ ಪ್ರಶ್ನೆ ಮತ್ತು ಮೂರು, ಸಬ್ಜೆಕ್ಟ್ ಒಬ್ಜೆಕ್ಟ್ ಮಧ್ಯೆ ಅಂತರ ಇರಬೇಕು ಎನ್ನುವ ಅಂಶ. ಇವುಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದೇನೆ.

**೯. ಸಮಾಜ ಸಂಶೋಧನ ಮತ್ತು ದಲಿತ ಲೋಕ, ಅಭಿವೃದ್ಧಿ ಅಧ್ಯಯನ, ಸಂಪುಟ ೭, ಸಂಚಿಕೆ ೧ ಮತ್ತು ೨, ಜುಲೈ ಡಿಸೆಂಬರ್ ೨೦೦೯**

ಪ್ರಸಕ್ತ ಸಮಾಜ ಸಂಶೋಧನ ದೃಷ್ಟಿಕೋನ ಮತ್ತು ವಿಧಾನಗಳಿಂದ ದಲಿತ ಬದುಕನ್ನು ಅರ್ಥಮಾಡಿ ಕೊಟ್ಟಿಕೊಡಲು ಸಾಧ್ಯವೇ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ. ಸಮಾಜ ಸಂಶೋಧನೆಯ ತಾತ್ವಿಕ ಹಿನ್ನೆಲೆ/ದೃಷ್ಟಿಕೋನ, ವಿಧಾನ ಮತ್ತು ಭಾಷೆ ಈ ಮೂರು ಅವುಗಳ ಮೂಲರೂಪದಲ್ಲಿ ಸಮಾಜದ ಅಂಚಿನಲ್ಲಿರುವ ದಲಿತರ ಕಷ್ಟಸುಖಗಳನ್ನು ಹಿಡಿದಿಡಲು ಶಕ್ತವಲ್ಲ. ತಾತ್ವಿಕತೆ, ವಿಧಾನ ಮತ್ತು ಭಾಷೆ ಇತ್ಯಾದಿಗಳಲ್ಲಿ ಸಾಕಷ್ಟು ಪರಿವರ್ತನೆ ಮಾಡಿಕೊಂಡರೆ ದಲಿತ ಲೋಕವನ್ನು ಕಟ್ಟಿಕೊಡಲು ಸಾಧ್ಯ ಎನ್ನುವ ವಾದವನ್ನು ಈ ಲೇಖನ ಮಂಡಿಸುತ್ತದೆ.

**೧೦. ರೈತರ ಮಾರುಕಟ್ಟೆ ಸಮಸ್ಯೆಗಳು ಮತ್ತು ಪರಿಹಾರಗಳು, ಅಭಿವೃದ್ಧಿ ಅಧ್ಯಯನ, ವಾಲ್ಯೂಮ್ ೫, ನಂ.೧, ಜೂನ್ ೨೦೦೬**

ಆಂತರಿಕ ಹಾಗೂ ಬಾಹ್ಯ ಕಾರಣಗಳಿಗಾಗಿ ರೈತರು ಮಾರುಕಟ್ಟೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರೈತರ ಮಾರುಕಟ್ಟೆ ಸಮಸ್ಯೆಗಳನ್ನು ಆಂತರಿಕ ಅಥವಾ ನಮ್ಮ ಸಂಸ್ಕೃತಿಯೊಳಗಿನ ಬೆಳವಣಿಗೆಯ ದೃಷ್ಟಿಯಿಂದ ನೋಡಲು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ. ನನ್ನ ವಾದ ಇಷ್ಟೆ ರೈತರ ಇಂದಿನ ಈ ದುಃಸ್ಥಿತಿಗೆ ಬಾಹ್ಯ ಅಂಶಗಳು ಎಷ್ಟು ಕಾರಣವೋ ಅಷ್ಟೇ ಪ್ರಮಾಣದಲ್ಲಿ ಆಂತರಿಕ ಅಂಶಗಳು ಕೂಡ ಕಾರಣವಾಗಿವೆ. ಅವು ಯಾವುವು? ಅವುಗಳು ಹೇಗೆ ರೈತರ ಮಾರುಕಟ್ಟೆ ಸಂಬಂಧವನ್ನು ಪ್ರಭಾವಿಸಿವೆ? ರೈತರು ಎದುರಿಸುತ್ತಿರುವ ಈ ಆಂತರಿಕ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದು? ಇತ್ಯಾದಿ ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಂಡು ಲೇಖನದ ಚರ್ಚೆ ಮುಂದುವರಿಯುತ್ತದೆ.

**೧೭. ಪಿಎಚ್.ಡಿ ಮಾರ್ಗದರ್ಶನ**

| ಅಭ್ಯರ್ಥಿಗಳು | ಶೀರ್ಷಿಕೆ | ಪದವಿಘೋಷಿಸಿದ ದಿನಾಂಕ |
|---|---|---|
| ೧. ಸಿದ್ದಪ್ಪ, | ಪ್ರವಾಸೋದ್ಯಮ ಮತ್ತು ಅಭಿವೃದ್ಧಿ ಹಂಪೆಯ ಅಧ್ಯಯನ, | ೨೦೦೩ |



PDF created with pdfFactory trial version www.pdffactory.com

ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಯಲ್ಲಿ ಅಸಂಘಟಿತ ಪ್ರವಾಸೋದ್ಯಮದ ಪಾತ್ರವನ್ನು ವಿಶ್ಲೇಷಿಸುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶ. ಹಂಪಿಯ ಪ್ರವಾಸೋದ್ಯಮವನ್ನು ಅಧ್ಯಯನ ಮಾಡುವ ಮೂಲಕ ಅಸಂಘಟಿತ ಪ್ರವಾಸೋದ್ಯಮ ವಲಯದ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

**೨. ಯರ್ರಿಸ್ವಾಮಿ, ವಿಕೇಂದ್ರೀಕೃತ ಅಭಿವೃದ್ಧಿ ಒಣ ಹಾಗೂ ನೀರಾವರಿ ಪ್ರದೇಶದ ಪಂಚಾಯತ್‌ಗಳ ತುಲನಾತ್ಮಕ ಅಧ್ಯಯನ ೨೦೦೪**

ಅಭಿವೃದ್ಧಿ ಕಾರ್ಯಕ್ರಮಗಳನ್ನು ತಳಮಟ್ಟದ ಜನರಿಗೆ ಕ್ರಮಬದ್ಧವಾಗಿ ತಲುಪಿಸಿ ಅವರನ್ನು ಸಶಕ್ತೀಕರಣಗೊಳಿಸುವುದು ವಿಕೇಂದ್ರೀಕರಣದ ಮುಖ್ಯ ಉದ್ದೇಶ. ಈ ಉದ್ದೇಶಗಳನ್ನು ಪಂಚಾಯತ್‌ಗಳು ಎಷ್ಟರ ಮಟ್ಟಿಗೆ ತಳಮಟ್ಟದಲ್ಲಿ ಕಾರ್ಯರೂಪಕ್ಕೆ ತಂದಿದೆ ಅಥವಾ ಪಂಚಾಯತ್ ತನ್ನ ಜವಾಬ್ದಾರಿಯನ್ನು ಎಷ್ಟು ಸಮರ್ಪಕವಾಗಿ ನಿಭಾಯಿಸಿದೆ ಎಂದು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶ.

**೩. ವಾಲ್ಟರ್ ಡಿ ಸೋಜ ಗಲ್ಫ್ ಮೈಗ್ರೇಶನ್ ಆಂಡ್ ಇಟ್ಸ್ ಸೋಶಿಯೋ ಎಕನಾಮಿಕ್ ಇಂಪೇಕ್ಟ್ ಎ ಸ್ಟಡಿ ಆಫ್ ಕೋಸ್ಟಲ್ ಕರ್ನಾಟಕ ೨೦೦೪**

ಕರ್ನಾಟಕ ರಾಜ್ಯದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೊಲ್ಲಿ ರಾಷ್ಟ್ರಗಳಿಗೆ ವಲಸೆ ಹೋಗಿದ್ದಾರೆ. ಯಾರು ವಲಸೆ ಹೋಗಿದ್ದಾರೆ? ಯಾಕೆ ವಲಸೆ ಹೋಗುತ್ತಾರೆ? ಹೇಗೆ ವಲಸೆ ಹೋಗುತ್ತಾರೆ? ಮತ್ತು ವಲಸೆ ಉದ್ಯೋಗದಿಂದ ಬರುವ ಆದಾಯವನ್ನು ಇವರು ಹೇಗೆ ವಿನಿಯೋಜಿಸುತ್ತಿದ್ದಾರೆ ಇವರ ವಿನಿಯೋಜನೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಸಮಾಜ ಹಾಗೂ ಅರ್ಥ ವ್ಯವಸ್ಥೆಯ ಮೇಲೆ ಆದ ಪರಿಣಾಮಗಳೇನು ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಮಹಾಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

**೪. ಹೆಚ್.ಆರ್.ಕೃಷ್ಣಮೂರ್ತಿ ಸಹಭಾಗಿತ್ವ ಅಭಿವೃದ್ಧಿ ಕರ್ನಾಟಕದ ಜಂಟೀ ಅರಣ್ಯ ನಿರ್ವಹಣೆಯ ವಿಮರ್ಶಾತ್ಮಕ ಅಧ್ಯಯನ, ೨೦೦೫**

ಈ ಸಂಶೋಧನೆಯ ಮುಖ್ಯ ಉದ್ದೇಶಗಳು ಹೀಗಿವೆ. ಜಂಟೀ ಅರಣ್ಯ ಯೋಜನೆಯಲ್ಲಿ ಸಹಭಾಗಿತ್ವ ಅಭಿವೃದ್ಧಿ ನೀತಿಯನ್ನು ಸೂತ್ರೀಕರಿಸಿರುವ ರೀತಿ, ಈ ನೀತಿಯ ಉಗಮ, ವಿಕಾಸ, ಅನುಷ್ಠಾನಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು, ಗ್ರಾಮ ಅರಣ್ಯ ಸಮಿತಿ ಮತ್ತು ನಿರ್ವಹಣೆ ಸಮಿತಿಗಳ ಕಾರ್ಯ ವಿಧಾನವನ್ನು ಕೂಲಂಕುಶವಾಗಿ ಪರಿಶೀಲಿಸುವುದು. ಸಹಭಾಗಿತ್ವ ಅಭಿವೃದ್ಧಿಯ ಎಲ್ಲಾ ಆಯಾಮಗಳನ್ನೂ ಪರಿಶೀಲಿಸುವುದು ಮತ್ತು ಜಂಟೀ ಅರಣ್ಯ ಯೋಜನೆಯಲ್ಲಿರುವ ಒಟ್ಟಾರೆ ಸಹಭಾಗಿತ್ವ ಅಭಿವೃದ್ಧಿಯ ಸ್ವರೂಪವನ್ನು ನಿರ್ಧರಿಸುವುದು.

**೧೮. ನಿರ್ವಹಿಸಿದ ಇತರೆ ಕೆಲಸಗಳು**

**೧. ಆಡಳಿತಾತ್ಮಕ ಕೆಲಸಗಳು**

ಅ. ವಿಭಾಗದ ಮುಖ್ಯಸ್ಥರಾಗಿ ಕೆಲಸಮಾಡಿರುವುದು.

ಆ. ವಿಶ್ವವಿದ್ಯಾಲಯ ಕಾಲಕಾಲಕ್ಕೆ ನೇಮಕ ಮಾಡುವ ಸಮಿತಿಗಳಲ್ಲಿ ಸದಸ್ಯರಾಗಿ ಕೆಲಸ ಮಾಡಿರುವುದು

**೨. ಹೆಚ್ಚಿನ ಜವಾಬ್ದಾರಿಗಳು**

೧. ವಿಭಾಗದ ಪತ್ರಿಕೆಗೆ ಸಂಪಾದಕರಾಗಿ ಕೆಲಸ ಮಾಡಿರುವುದು

೨. ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘದ ಅಧ್ಯಕ್ಷರಾಗಿ ಕೆಲಸ ಮಾಡಿರುವುದು



PDF created with pdfFactory trial version www.pdffactory.com